6. ಉಳ್ಳಾಲ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟ 15 ಗ್ರಾಮಗಳ ಮನೆ ನಿವೇಶನ ಹೊಂದಿರುವ ಬಡಾವಣೆಗಳಲ್ಲಿ ಕುಡಿಯುವ ನೀರಿನ ಅಭಾವ

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ಉಳ್ಳಾಲ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟ 15ಗ್ರಾಮಗಳ ಮನೆ ನಿವೇಶನ ಹೊಂದಿರುವ ಬಡವಾಣೆಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದ್ದು, ಈಗಾಗಲೇ 5 ಕಡೆಗಳಲ್ಲಿ ನಿರ್ಮಿಸಿರುವ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಆಳವಡಿಸಿರುವ ಕೊಳವೆ ಬಾವಿಗಳು ಪೂರ್ತಿ ಹಾಳಾಗಿದ್ದು ಬದಲಿ ನೀರಿನ ವ್ಯವಸ್ಥೆಗೆ ತುರ್ತು ಆಗಿ ಕಾಮಗಾರಿಯನ್ನು ರಚಿಸಲು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಗೆ ಕನಿಷ್ಠ 50 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾಗಿ ಕರ್ನಾಟಕ ಸರ್ಕಾರವನ್ನು ಈ ಸಭೆಯ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದಿವಸವೇ ಹೆಚ್ಚಿನ ಮಾಹಿತಿಯನ್ನು ತರಿಸಿಕೊಂಡು ಉತ್ತರ ಆಮೇಲೆ ಹೇಳುತ್ತೇನೆ. ಏಕೆಂದರೆ ಮಾನ್ಯ ಸದಸ್ಯರು 50ಲಕ್ಷ ರೂಪಾಯಿ ಬಿಡುಗಡೆ ಮಾಡಬೇಕೆಂದು ಕೇಳಿದ್ದಾರೆ. ಅದಕ್ಕೆ ಅನುಮತಿ ಇದೆಯೋ ಇಲ್ಲವೊ ಅದನ್ನು ಪರಿಶೀಲನೆ ಮಾಡಬೇಕಾಗಿದೆ. ಇನ್ನೂ ಸ್ವಲ್ಪ ಸಮಯದಲ್ಲಿ ಎಲ್ಲಾ ಮಾಹಿತಿಗಳನ್ನು ಒದಗಿಸಿಕೊಡುತ್ತೇನೆ.

7. ಶಿವಮೊಗ್ಗ ಪೌರಸಭೆಯನ್ನು ಮಹಾನಗರ ಪಾಲಿಕೆಯಾಗಿ ಪರಿವರ್ತನೆ

ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಮಹಾನಗರಪಾಲಿಕೆಯಾಗಿ ಆಗಿನ ಮುಖ್ಯ ಮಂತ್ರಿಗಳಾಗಿದ್ದ ಬಂಗಾರಪ್ಪನವರು ಅವರ ಕಾಲದಲ್ಲಿ ಪರಿವರ್ತನೆ ಮಾಡಿದ್ದರು. ಆದಾದ ನಂತರ ಮೊಯಿಲಿಯವರ ಸರ್ಕಾರ ಬಂದಾಗ ಅದನ್ನು ರದ್ದು ಪಡಿಸಿದ್ದಾರೆ. ಇದರಿಂದ ಕೆಲವು ಗ್ರಾಮಗಳ ಸಾರ್ವಜನಿಕರಿಗೆ ತೊಂದರೆಯಾಗಿದೆ. ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಂದರೆ ಶಿವಮೊಗ್ಗ ನಗರಕ್ಕೆ ಹೊಂದಿಕೊಂಡಂತೆ 15-20ಗ್ರಾಮಗಳು ಹೊಸ ನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತವೆ. ಅಲ್ಲಿನ ಜನಗಳಿಗೆ ನೀರು, ದೀಪ, ರಸ್ತೆ ಸೌಲಭ್ಯಗಳು ಸಿಗುತ್ತಿಲ್ಲ, ಕನಿಷ್ಠ ಸೌಲಭ್ಯಗಳೂ ಸಹ ದೊರಕುತ್ತಿಲ್ಲ, ಇವುಗಳ ಸಮಸ್ಯೆ ಬಂದಾಗ ನಗರ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ ಅದು ನಮಗೆ ಸೇರಿಲ್ಲವೆಂದು ಹೇಳುತ್ತಾರೆ. ಅಲ್ಲಿ ಯಾವ ಪಂಚಾಯಿತಿಯ ಚುನಾವಣೆಯಲ್ಲೂ ಆಗಲಿಲ್ಲ, ಅವರು ಮಹಾ ನಗರಪಾಲಿಕೆಗೆ ಸೇರಿದೆಯೆಂದು ಹೇಳುತ್ತಾರೆ. ಅವರು ಈ ಕಡೆಗೂ ಇಲ್ಲ ಆ ಕಡೆಗೂ ಇಲ್ಲ, ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ದಯಮಾಡಿ ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣವನ್ನು ನೀಡಬೇಕು. ನಾಗರೀಕರಿಗೆ ಸೌಲಭ್ಯಗಳು ದೊರಕುವ ಹಾಗೆ ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ದಿನಾಂಕ 14-7-92ರಂದು ಅಧಿಸೂಚನೆಯಲ್ಲಿ ಗಾಡಿಕೊಪ್ಪ, ನಿಧಿಗೆ, ಮಲಗಗೊಪ್ಪ, ಕಡದಕಟ್ಟೆ ಮತ್ತು ಹಿರಿಯೂರು ಮಂಡಲ ಪಂಚಾಯಿತಿಗಳನ್ನು ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಸೇರಿಸಿ ದಿನಾಂಕ 18-7-92ರ ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಪ್ರಾಯಶಃ ನಗರಾಭಿವೃದ್ಧಿ ಸಚಿವರು ಉತ್ತರ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳಿದ್ದುದು ಸಾಬೀತಾಯಿತು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಆಯನೂರು ಮಂಜುನಾಥ್ ರವರು ಹೇಳತಕ್ಕದ್ದು ಪೂರ್ಣ ಸರಿಯಾಗಿದೆ. ಶಿವಮೊಗ್ಗ ಭದ್ರಾವತಿ ಸುತ್ತಮುತ್ತ ಇದೆ ಸಮಸ್ಯೆಯಿದೆ. ಕೆಲವು ಗ್ರಾಮಪಂಚಾಯಿತಿಗಳು ಕಾರ್ಪೋರೇಷನ್ನಿಗೂ ಸೇರುತ್ತಿಲ್ಲ, ಜಿಲ್ಲಾ ಪಂಚಾಯಿತಿಗೂ ಸೇರುತ್ತಿಲ್ಲ.

ಅಧ್ಯಕ್ಷರು : ಇದರ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರೆ ಒಳ್ಳೆಯದು. ಏಕೆಂದರೆ ಇದು ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಿದ್ದುದು. ನೀವೆಲ್ಲರೂ ಕುಳಿತು ಸಮರ್ಪಕವಾಗಿ ಮಾತನಾಡಿದರೆ ಒಳ್ಳೆಯದು.

ಶ್ರೀ ಎಂ. ಪಿ. ಪ್ರಕಾಶ್ : ನಮ್ಮ ವ್ಯಾಪ್ತಿಗೆ ಬಂದಿದ್ದರೆ ಚುನಾವಣೆಯಾಗಬೇಕಾಗಿತ್ತು. ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಮಾನ್ಯ ವೈಜನಾಥ ಪಾಟೀಲರು ಇದಕ್ಕೆ ಉತ್ತರಿಸುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಅದು ಕಾರ್ಪೋರೇಷನ್ ಆಗಿರುವುದರಿಂದ ಈ ಗ್ರಾಮಪಂಚಾಯಿತಿಗಳು ಇನ್ನು ಕಾರ್ಪೋರೇಷನ್ ಹ್ಯಾಂಡ್ ಓವರ್ ಆಗಿಲ್ಲ, ಅಲ್ಲಿ ಇನ್ನೂ ಚುನಾವಣೆಯಾಗಿಲ್ಲಯ ಆ ಗ್ರಾಮ ಪಂಚಾಯಿತಿಗಳಿಗೆ ಯಾವುದೇ ಸಾಮಾನ್ಯ ಸೌಲಭ್ಯಗಳು ಸಿಗುತ್ತಿಲ್ಲ, 120 ಹಳ್ಳಿಗಳು ಇದೇ ತರಹ ಇವೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನನ್ನ ಹತ್ತಿರ ಯಾವುದೇ ಮಾಹಿತಿ ಇಲ್ಲ, ತರಿಸಿ ಉತ್ತರ ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಾಟೀಲ್ : 5ನೇ ತಾರೀಖು ಶಿವಮೊಗ್ಗ ಜಿಲ್ಲೆಯ ಎಲ್ಲಾ ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ತಾವು ಆ ಮೀಟಿಂಗ್‌ನಲ್ಲಿ ಭಾಗವಹಿಸಬಹುದು.

8. ಶಿವಮೊಗ್ಗ ನಗರದಲ್ಲಿ ಮೂರು ಸಂಕೀರ್ಣ (ಕಟ್ಟಡಗಳನ್ನು ಕಟ್ಟಿಸುವುದರ ಬಗ್ಗೆ :

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರದಲ್ಲಿನ ಮೂರು ಸಂಕೀರ್ಣಗಳ ಕಟ್ಟಡಗಳನ್ನು ಕಟ್ಟಲು ಪತ್ರಿಕೆಗಳಲ್ಲಿ ಪ್ರಕಟಿಸಿ ಎರಡು ಕಟ್ಟಡಗಳ ಕಾರ್ಯ ಆರಂಭವಾಗಿದೆ. ಆದರೆ 3ನೇ ಸಂಕೀರ್ಣ ವಿನಾಯಕ ಟಾಕೀಸ್ ಪಕ್ಕದಲ್ಲಿ ಕಟ್ಟಲು ಎಲ್ಲಾ ತಯಾರಿಯಾಗಿದ್ದಾಗ ಹೆಚ್ ಯು ಡಿಯಿಂದ ತಾತ್ಕಾಲಿಕ ತಡೆಯಾಜ್ಞೆ ಕಳುಹಿಸಿ ಆ ಕಟ್ಟಡಕ್ಕೆ ಕೆಲಸ ಆರಂಭಿಸಲು ಆಗಲಿಲ್ಲ. ಆ ತಡೆಯಾಜ್ಞೆ ತೆರವು ಮಾಡಿ ಸಂಕೀರ್ಣ ಕಟ್ಟಡ ಕಾರ್ಯ ಆರಂಭಿಸಲು ಸರ್ಕಾರ ತುರ್ತಾಗಿ ಕ್ರಮ ಕೈಗೊಳ್ಳುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಿನಾಯಕ ಚಿತ್ರಮಂದಿರ ಹತ್ತಿರ ಇರುವ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ಸರ್ಕಾರವು ದಿನಾಂಕ 4-6-94ರಂದು ತಡೆಯಾಜ್ಞೆ ನೀಡಿರುವುದು ಸರಿಯಷ್ಟೆ. ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸುತ್ತಿರುವ ಜಾಗದ ಬಗ್ಗೆ ಶಿವಮೊಗ್ಗ ಮಹಾ ನಗರಪಾಲಿಕೆ ಮತ್ತು ವಕ್ಫ್ ಮಂಡಳಿಯ ಮಧ್ಯೆ ತಕರಾರು ಇದೆ. ಇಂತಹ ಸಂದರ್ಭದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡುವುದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವ ಸಾಧ್ಯತೆಗಳು ಇರುವುದರಿಂದ ಸರ್ಕಾರ ತಡೆಯಾಜ್ಞೆ ನೀಡಿದೆ. ಶಿವಮೊಗ್ಗ ಜಿಲ್ಲಾಧಿಕಾರಿಗಳನ್ನು ಅಲ್ಲಿಯ ಪ್ರಸ್ತುತ ಸನ್ನಿವೇಶವನ್ನು ಪರಿಶೀಲಿಸಿ ಅವರ ಅಭಿಪ್ರಾಯದೊಂದಿಗೆ ವರದಿ ಕಳುಹಿಸಲು ಕೋರಲಾಗಿದೆ. ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾಗುವ ವರದಿಯನ್ನಾಧರಿಸಿ ತಡೆಯಾಜ್ಞೆಯನ್ನು ತೆರವು ಗೊಳಿಸುವ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವರು.